ಸೌರಶಕ್ತಿ ಘಟಕ ಅಳವಡಿಕೆಯಿಂದ ಬೆಳಕು | ಮಿಕ್ಸಿ, ಫ್ಯಾನ್ ಬಳಕೆಗೂ ಅನುಕೂಲ

# ಅಂಗನವಾಡಿಗಳ ವಿದ್ಯುತ್ ಸ್ವಾವಲಂಬನೆ

■ **ರಾಮಚಂದ್ರಮೂರ್ತಿ ಚೆಲ್ಲಹಳ್ಳಿ** ಯಲಹಂಕ

ಸೌರಶಕ್ತಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಮೂಲಕ ಅಂಗನವಾಡಿ ಕೇಂದ್ರಗಳು ವಿದ್ಯುತ್ ಸ್ವಾವಲಂಬನೆಗೆ ಮುಂದಾಗಿವೆ.

ಬೆಂಗಳೂರು ಉತ್ತರ ತಾಲೂಕಿನ ಗ್ರಾಮ ಪಂಚಾಯಿತಿಗಳ ಅನುದಾನದಿಂದ ಬಾಗಲೂರು ಚಿಕ್ಕ ಜಾಲ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ 10 ಕೇಂದ್ರಗಳಲ್ಲಿ ಸೌರಶಕ್ತಿ ಅಳವಡಿಸಲಾಗಿದ್ದು, 120 ಅಂಗನವಾಡಿ ಕೇಂದ್ರಗಳಲ್ಲಿ ಸೌರಶಕ್ತಿ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದೆ. "ಶಾಸಕರು ಮತ್ತು ಜಿಲ್ಲಾ, ತಾಲೂಕು ಪಂಚಾಯಿತಿ ಸದಸ್ಯರ ಅನುದಾನ ಬಳಕೆ ಮಾಡಿಕೊಂಡು ಮುಂದಿನ ವರ್ಷದೊಳಗೆ 250 ಅಂಗನವಾಡಿ ಕೇಂದ್ರಗಳಿಗೆ ಸೌರಶಕ್ತಿ ಅಳವಡಿಸಲಾಗುವುದು," ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ಡಾ. ಸಿದ್ದರಾಮಣ್ಣ ತಿಳಿಸಿದ್ದಾರೆ.

"ಈ ಸೌರಶಕ್ತಿ ಘಟಕದಿಂದ ಒಂದು ಫ್ಯಾನ್, ಮೂರು ಬಲ್ಬ್ ಹಾಗೂ ಮಿಕ್ಸಿ ಓಡಿಸಬಹುದು. ಈ ಸೌರ ವಿದ್ಯುತ್ ಘಟಕದ ಅಳವಡಿಕೆಗೆ 18 ಸಾವಿರ ರೂ. ವೆಚ್ಚವಾಗುತ್ತದೆ. ಅದರಲ್ಲಿ ಎರಡು ವರ್ಷದ ಉಚಿತ ನಿರ್ವಹಣೆಯೂ ಸೇರಿದೆ," ಎಂದು ಬಾಗಲೂರು ಗ್ರಾ.ಪಂ ಕಾರ್ಯದರ್ಶಿ ರಂಗಸ್ವಾಮಿ ತಿಳಿಸಿದರು.



ಅಂಗನವಾಡಿಯಲ್ಲಿ ಸೌರ ಶಕ್ತಿಯಿಂದ ದೀಪ ಉರಿಯುತ್ತಿರುವುದು.

ಅಂಗನವಾಡಿ ಕೇಂದ್ರಗಳಿಗೆ 150-200 ರೂ. ವಿದ್ಯುತ್ ಬಿಲ್ ಬರುತ್ತಿತ್ತು. ಬಿಲ್ ಪಾವತಿಸುವುದಕ್ಕೆ ಸರ್ಕಾರದಿಂದ ಯಾವುದೇ ಅನುದಾನ ಬರುತ್ತಿರಲಿಲ್ಲ. ಈ ಹಣಕ್ಕಾಗಿ ಗ್ರಾಮ ಪಂಚಾಯಿತಿಗಳನ್ನು ಇಲ್ಲವೇ ನಾವೇ ಭರಿಸಬೇಕಾಗಿತ್ತು. ಈಗ ಸೋಲಾರ್ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿರುವುದರಿಂದ ಹಣ ಭರಿಸುವ ಅವಶ್ಯಕತೆ ತಪ್ಪಿದೆ," ಎಂದು ಬಾಗಲೂರು ಅಂಗನವಾಡಿ ಕೇಂದ್ರ ಕಾರ್ಯಕರ್ತೆ ಸುಜಾತ ತಿಳಿಸಿದರು.



ನಮ್ಮ ಕೇಂದ್ರದ ಸುತ್ತಲು ಬಿಲ್ಡಿಂಗ್ ಇರುವುದರಿಂದ ಸರಿಯಾದ ಸೂರ್ಯನ ಬೆಳಕು ಬರುತ್ತಿರಲಿಲ್ಲ. ಹೀಗಾಗಿ ನಾವು ವಿದ್ಯುತ್ ವ್ಯವಸ್ಥೆಯನ್ನು ಕಲ್ಪಿಸಿಕೊಂಡಿದ್ದೆವು. ಕರೆಂಟ್ ಸಮಸ್ಯೆ ಆದಾಗ ಕತ್ತಲೆಯಲ್ಲಿ ಇರಬೇಕಾಗಿತ್ತು. ಆದರೆ, ಈಗ ಸೋಲಾರ್ ಅಳವಡಿಸಿಕೊಂಡಿದ್ದು, ಬೆಳಕು, ಫ್ಯಾನ್ ಮತ್ತು ಮಿಕ್ಸಿಗೆ ಬಳಸಿಕೊಳ್ಳುತ್ತಿದ್ದೇವೆ. ಬಳಕೆಗೆ ಯಾವುದೇ ಸಮಸ್ಯೆ ಇಲ್ಲ, ಇದು ನಮಗೆ ಬಹುಪಯೋಗಿಯಾಗಿದೆ ಎಂದರು.

**ನಾಗವೇಣಿ**, ಕಾರ್ಯಕರ್ತೆ
ಬಾಗಲೂರು ಅಂಗನವಾಡಿ ಕೇಂದ್ರ

---

ಉಪನಗರ ವಾರ್ತೆ

# '7000 ಟ್ರಾನ್ಸ್‌ಫಾರ್ಮರ್ ಖರೀದಿ'

■ **ವಿಕ ಸುದ್ದಿಲೋಕ** ಕೆಂಗೇರಿ ಉಪನಗರ

ಕರ್ನಾಟಕ ವಿದ್ಯುತ್ ಕಾರ್ಖಾನೆಯಿಂದ 7000 ಟ್ರಾನ್ಸ್‌ಫಾರ್ಮರ್‌ಗಳನ್ನು ಖರೀದಿಸಿ ಗ್ರಾಮಾಂತರ ಲೋಕಸಭಾ ವ್ಯಾಪ್ತಿಯಲ್ಲಿ ಅಳವಡಿಸಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಸದಸ್ಯ ಡಿ ಕೆ ಸುರೇಶ್ ಹೇಳಿದರು.

ಮೈಸೂರು ರಸ್ತೆಯಲ್ಲಿರುವ ಕರ್ನಾಟಕ ವಿದ್ಯುತ್ ಕಾರ್ಖಾನೆಗೆ (ಕವಿಕಾ) ಕ್ಷೇತ್ರದ ಬೆಸ್ಕಾಂ ಅಧಿಕಾರಿಗಳೊಂದಿಗೆ ಭೇಟಿ ನೀಡಿ, ಟ್ರಾನ್ಸ್‌ಫಾರ್ಮರ್ ಉತ್ಪಾದನಾ ಘಟಕದ ಪರಿಶೀಲನೆ ಮಾಡಿ, ವಿವರಗಳನ್ನು ಪಡೆದರು.

ಬಳಿಕ ಮಾತನಾಡಿದ ಅವರು "ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಬೆಸ್ಕಾಂ ಉಪ ವಿಭಾಗಗಳಿಗೆ ಏಳು ಸಾವಿರಕ್ಕೂ ಅಧಿಕ ಟ್ರಾನ್ಸ್‌ಫಾರ್ಮರ್‌ಗಳು ಬೇಕಾಗಿದೆ. ಅವನ್ನು ಖರೀದಿಸಲಾಗುವುದು. ಜತೆಗೆ ಸಂಸ್ಥೆಗೆ ಕೊಡಬೇಕಾದ ಬಾಕಿ ಹಣವನ್ನು ಶೀಘ್ರ ವಿತರಣೆ ಮಾಡಲಾಗುವುದು," ಎಂದರು.



ಕರ್ನಾಟಕ ವಿದ್ಯುತ್ ಕಾರ್ಖಾನೆಗೆ ಭೇಟಿ ಕೊಟ್ಟ ಸಂಸದ ಡಿ ಕೆ ಸುರೇಶ್ ಅವರನ್ನು ಅಧಿಕಾರಿಗಳು ಹೂಗುಚ್ಛ ನೀಡಿ ಸ್ವಾಗತಿಸಿದರು.

ಕವಿಕಾದ ವ್ಯವಸ್ಥಾಪಕ ನಿರ್ದೇಶಕರು ಈ ವೇಳೆ ಮಾತನಾಡಿ "2017ರ ಮಾರ್ಚ್ ಒಳಗಾಗಿ ಏಳು ಸಾವಿರ ಟ್ರಾನ್ಸ್‌ಫಾರ್ಮರ್‌ಗಳನ್ನು ನೀಡುವ ವ್ಯವಸ್ಥೆ ಮಾಡಲಾಗುವುದು. ಒಪ್ಪಿಕೊಂಡಿರುವ ದರದಲ್ಲಿಯೇ ನೀಡಲಾಗುವುದು," ಎಂದು ಭರವಸೆ ನೀಡಿದರು.

ಕವಿಕಾದ ಅಧ್ಯಕ್ಷ ಎಸ್ ಮನೋಹರ್, ವ್ಯವಸ್ಥಾಪಕ ನಿರ್ದೇಶಕ ಡಾ. ಡಬ್ಲ್ಯು ಎಂ ಶಿವಕುಮಾರ್, ಕಾರ್ಯನಿರ್ವಾಹಕ ನಿರ್ದೇಶಕ ಎನ್ ಕೆ ರಾಮಚಂದ್ರನ್ ಮತ್ತಿತರರು ಇದ್ದರು.

---

# ಬೆಸ್ಕಾಂ ನೌಕರ ಎಸಿಬಿ ಬಲೆಗೆ

ಲಂಚ ಪಡೆಯುತ್ತಿದ್ದ ಬೆಸ್ಕಾಂ ಕಚೇರಿಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್‌ನನ್ನು ಎಸಿಬಿ ಪೊಲೀಸರು ಬಂಧಿಸಿದ್ದಾರೆ.

ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಬೆಸ್ಕಾಂ ಕಚೇರಿಯ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರ ರವೀಶ್ ಬಂಧಿತ ಆರೋಪಿ. ತುಮಕೂರು ಜಿಲ್ಲೆಯ ಶಿವಪುರ ಗ್ರಾಮದಲ್ಲಿ ಬೆಸ್ಕಾಂ ಸಂಸ್ಥೆಗೆ ಸೇರಿದ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಹಾಳಾಗಿದ್ದು, ಶಿವಪುರ ಗ್ರಾಮದ ಕೆಲವು ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜು ಕಡಿತಗೊಂಡಿತ್ತು. ಹಾಳಾಗಿರುವ ಟ್ರಾನ್ಸ್‌ಫಾರ್ಮರ್‌ನ್ನು ಬದಲಾಯಿಸುವಂತೆ ಶಿವಪುರ ಗ್ರಾಮದ ಕೆಲವು ಗ್ರಾಮಸ್ಥರು ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಬೆಸ್ಕಾಂ ಕಚೇರಿಗೆ ಮನವಿ ಸಲ್ಲಿಸಿದ್ದರು. ಟ್ರಾನ್ಸ್‌ಫಾರ್ಮರ್‌ನ್ನು ಬದಲಾಯಿಸಲು ಆರೋಪಿ 10 ಸಾವಿರ ಲಂಚ ನೀಡುವಂತೆ ಒತ್ತಾಯಿಸಿದ್ದ. ಈ ವಿಷಯವನ್ನು ದೂರುದಾರರು ಎಸಿಬಿ ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ದಾಳಿ ನಡೆಸಿದ ಎಸಿಬಿ ಅಧಿಕಾರಿಗಳು, ಆರೋಪಿ ಲಂಚ ಪಡೆಯುತ್ತಿದ್ದ ಸಂದರ್ಭ ಆತನನ್ನು ಬಂಧಿಸಿ, ಆತನ ವಿರುದ್ಧ ಸೂಕ್ತ ಕ್ರಮ ಕೈಗೊಂಡಿದ್ದಾರೆ.

---

# ರಸ್ತೆ ಅಗೆಯಲು ಆನ್‌ಲೈನ್‌ನಲ್ಲೇ ಅನುಮತಿ

ನಾಗರಿಕರು ರಸ್ತೆ, ಒಳಚರಂಡಿ ಮತ್ತು ವಿದ್ಯುತ್ ಸಂಪರ್ಕಕ್ಕಾಗಿ ರಸ್ತೆ ಅಗೆಯಲು ಅನುಮತಿ ಪಡೆಯಲು ಇನ್ನು ಮುಂದೆ ಪಾಲಿಕೆ ಕಚೇರಿಗೆ ಅಲೆದಾಡಬೇಕಿಲ್ಲ. ಅದನ್ನು ಆನ್‌ಲೈನ್‌ನಲ್ಲಿ ಪಡೆಯಬಹುದು.

**ಜಿಐಎಸ್ ಆಧಾರಿತ ಆಸ್ತಿ ತೆರಿಗೆ ಮಾಹಿತಿ ವ್ಯವಸ್ಥೆ:** ನಾಗರಿಕರು ತಮ್ಮ ಆಸ್ತಿಗಳ ತೆರಿಗೆ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ತಿಳಿಯಬಹುದು. ಎಂಟು ವರ್ಷಗಳ ತೆರಿಗೆ ಪಾವತಿ ಮಾಹಿತಿ ದೊರಕುತ್ತದೆ. ಯಾವ ವರ್ಷ ತೆರಿಗೆ ಪಾವತಿಸಿಲ್ಲ ಎಂಬ ವಿವರವೂ ದೊರಕುತ್ತದೆ ಎಂದರು.

ವಿಜಯವಾಣಿ, Pg-04, 28/12/2016

**ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ**
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN - UO4010KA2002SGC030438)

**ಅಲ್ಪಾವಧಿ ಟೆಂಡರ್ ಪ್ರಕಟಣೆ** (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆವಿಕಂ, ಕೋಲಾರ ಗ್ರಾ. ಕಾ.ಪಾ ವಿಭಾಗದ ಶ್ರೀನಿವಾಸಪುರ ಉಪ-ವಿಭಾಗದಲ್ಲಿ ಸಂಪೂರ್ಣ ಟರ್ನ್ ಕೀ ಆಧಾರದ ಮೇಲೆ ಪರ್ಸೆಂಟೇಜ್ ಮೂಲಕವಾಗಿ ಅರ್ಹ ಸಂಸ್ಥೆಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕೆಲಸದ ಹೆಸರು: 1) ರ್‍ಯಾಬಿಟ್ ಕಂಡಕ್ಟರ್‌ನಿಂದ ಎಲ್‌ಟಿ 2/4 ಎಎಸ್‌ಸಿಆರ್‌ನ ರೀ-ಕಂಡಕ್ಟರಿಂಗ್ (ವಿಚಾರಣೆ ಸಂಖ್ಯೆ ಕೆಎಲ್‌ಆರ್-24 ದಿನಾಂಕ 23.12.2016). ಟೆಂಡರಿಗಿಟ್ಟ ಅಂದಾಜು ಮೊತ್ತ ರೂ.25/-ಲಕ್ಷಗಳು (12 ಕಾಮಗಾರಿಗಳು). 2) ಗೌನಪಲ್ಲಿ ಶಾಖೆಯ ಬೈರಗಾನಪಲ್ಲಿ ಡಿಪಿಯಿಂದ ಹೊಸೋಡ್ಯ ಡಿಪಿಯವರೆಗೆ ಎಎಫ್-6 ಮಾರಸನಪಲ್ಲಿಯ ಹೆಚ್‌ಟಿ ಮಾರ್ಗದ ರೀ-ಕಂಡಕ್ಟರಿಂಗ್ (ವಿಚಾರಣೆ ಸಂಖ್ಯೆ ಕೆಎಲ್‌ಆರ್-25 ದಿನಾಂಕ 23.12.2016). ಟೆಂಡರಿಗಿಟ್ಟ ಅಂದಾಜು ಮೊತ್ತ ರೂ.20/- ಲಕ್ಷಗಳು (1 ಕಾಮಗಾರಿ). ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಬಿಡ್‌ಗಳ ಲಭ್ಯತೆ: 27.12.2016 ರಿಂದ 11.01.2017, 15.00 ಗಂಟೆಯವರೆಗೆ. ಟೆಕ್ನೋ-ಕಮರ್ಷಿಯಲ್ ಬಿಡ್‌ಗಳನ್ನು ತೆರೆಯುವ ದಿನಾಂಕ: 13.01.2017, 16.00 ಗಂಟೆಗೆ. ಟೆಂಡರ್‌ನಲ್ಲಿ ಭಾಗವಹಿಸಲು ವಿವರಗಳನ್ನು ವೆಬ್‌ಸೈಟ್: **https://eproc.karnataka.gov.in** ನಲ್ಲಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಸಹಾಯವಾಣಿ : 080-25501227 / 25501236 ಮೂಲಕ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಬೆವಿಕಂ, ಗ್ರಾ, ಕಾ ಮತ್ತು ಪಾ ವಿಭಾಗ, ಕೋಲಾರ

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ : 1912

---

The Indian Express 28/12/16

**Bangalore Electricity Supply Company Limited**
(Wholly owned Government of Karnataka Undertaking)
(CIN - UO4010KA2002SGC030438)

**SHORT TERM TENDER NOTIFICATION** (Through e-Procurement)

BESCOM invites tenders from reputed firms for the following works on percentage basis on Total turnkey basis in Srinivasapura Sub-Division of C,O&M Division, Kolar. Name of the work: 1) Re-conductoring of LT 2/4 ASCR by Rabbit conductor (Enq. No KLR-24 Dated 23.12.2016). Approximate Cost put to Tender: Rs.25/- lakhs (12 Works). 2) Re-conductoring of HT line of AF-6 Marasanapally at Byraganapally DP to Hosodya DP in Gownapally section (Enq.No KLR-25/23.12.2016). Approximate Cost put to Tender: Rs.20/- lakhs (1 No. Work). Bids available in e-procurement from 27.12.2016 to 11.01.2017, 15.00 Hrs. Techno-commercial bid opening date: 13.01.2017 at 16.00 Hrs. For details, please visit website: **http://eproc.karnataka.gov.in**, helpdesk no: 080-25501216 / 25501227.

**Sd/- Executive Engineer, EL.,**
**BESCOM, C,O&M Division, Kolar**

For electricity related complaints call 1912

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಂಖ್ಯೆ: ಕವಿಪ್ರನಿನಿ/ಬಿ16/40360/2016-17 ದಿನಾಂಕ: 27.12.2016

## ಅಧಿಸೂಚನೆ

ವಿಷಯ: ಆನ್‌ಲೈನ್ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆ/ಉತ್ತರಗಳಿಗೆ ಆಕ್ಷೇಪಿಸುವ ಬಗ್ಗೆ.

ಉಲ್ಲೇಖ: 1. ನಿಗಮದ ದಿನಾಂಕ: 08.09.2016 ರ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016-17.

2. ಆನ್‌ಲೈನ್ ಸ್ಪರ್ಧಾತ್ಮಕ ಪರೀಕ್ಷೆಯ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016-17 ದಿನಾಂಕ: 15.12.2016.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ವಿವಿಧ ಎಸ್ಕಾಂಗಳಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್) ಮತ್ತು ಸಹಾಯಕ ಇಂಜಿನಿಯರ್(ಸಿವಿಲ್) ಹುದ್ದೆಗಳ ನೇಮಕಾತಿಗೆ ಆನ್‌ಲೈನ್ ಸ್ಪರ್ಧಾತ್ಮಕ ಪರೀಕ್ಷೆಯನ್ನು ದಿನಾಂಕ: 24.12.2016 ರಂದು ರಾಜ್ಯಾದ್ಯಂತ ವಿವಿಧ ಸ್ಥಳಗಳಲ್ಲಿ ನಡೆಸಲಾಗಿರುತ್ತದೆ.

ಆನ್‌ಲೈನ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಪ್ರಶ್ನೆಗಳು ಮತ್ತು ಉತ್ತರಗಳ ಮಾಸ್ಟರ್ ಕೀಗಳನ್ನು **(Master Answer Keys) www.kptcl.com, www.bescom.org, www.cescmysore.org, www.hescom.co.in and www.gescom.in** ವೆಬ್‌ಸೈಟ್‌ಗಳಲ್ಲಿ ಅಪ್‌ಲೋಡ್ ಮಾಡಲಾಗಿರುತ್ತದೆ. ಆದ್ದರಿಂದ ಪ್ರಶ್ನೆ ಹಾಗೂ ಉತ್ತರಗಳನ್ನು ವೀಕ್ಷಿಸಲು ಅಭ್ಯರ್ಥಿಗಳಿಗೆ ಅವಕಾಶವನ್ನು ನೀಡಲಾಗಿದ್ದು, ಯಾವುದೇ ಪ್ರಶ್ನೆ/ಉತ್ತರಗಳು ತಪ್ಪು ಎಂದು ಕಂಡುಬಂದಲ್ಲಿ, ಅಭ್ಯರ್ಥಿಗಳು ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ.

ಅಭ್ಯರ್ಥಿಗಳು ಆಕ್ಷೇಪಣೆಗಳನ್ನು ಸಲ್ಲಿಸುವಾಗ, ಸಂಭಾವಿತ ಉತ್ತರಗಳಿಗೆ ಸಮಜಾಯಿಷಿಯನ್ನು ಪೂರಕ ದಾಖಲೆಗಳೊಂದಿಗೆ ಸ್ಕ್ಯಾನ್ **(scan)** ಮಾಡಿ ತಮ್ಮ ಹೆಸರು, ಅರ್ಜಿ ಸಂಖ್ಯೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಯ ಸಂಖ್ಯೆ **(TAT)** ಹಾಗೂ ಅರ್ಜಿ ಸಲ್ಲಿಸಿದ ಹುದ್ದೆಯ ವಿವರಗಳನ್ನು ನಮೂದಿಸಿ **kptclrecruitment2016@gmail.com** ಐಡಿ ಗೆ ಇ-ಮೇಲ್ ಮಾಡುವುದು. **ಆಕ್ಷೇಪಣೆಗಳನ್ನು ಸ್ವೀಕರಿಸಲು ದಿನಾಂಕ: 30.12.2016 ಕೊನೆಯ ದಿನವಾಗಿರುತ್ತದೆ.**

**ಮೇಲೆ ತಿಳಿಸಿರುವ ಅವಧಿ ನಂತರ ಬಂದ ಯಾವುದೇ ಆಕ್ಷೇಪಣೆಗಳನ್ನು ಅಂಗೀಕರಿಸುವುದಿಲ್ಲ.**

ಸಹಿ/- ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ),
ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

# KARNATAKA POWER TRANSMISSION CORPORATION LIMITED

No: KPTCL/B16/40360/2016-17 The Hindu, Indian Express, DATED: 27.12.2016

## NOTIFICATION

**Sub:** Challenging of Question/Answer Keys of Online Aptitude Test - Reg.

**Ref:** 1 Employment Notification No: KPTCL/B16/40360/2016-17 dated 08.09.2016

2. Online Aptitude Test Notification KPTCL/B16/40360/2016-17 dated: 15.12.2016

The Online Aptitude Test for recruitment to the post of Assistant Executive Engineer (Elec.) and Assistant Engineer (Civil) in KPTCL/ESCOMs was held on 24.12.2016 in various centres across Karnataka.

The Master Questions and Answer Keys of the Online Aptitude Test is uploaded in **www.kptcl.com**, **www.bescom.org**, **www.cescmysore.org**, **www.hescom.co.in** and **www.gescom.in** websites. Candidates are given an opportunity to see the questions and the answers, as well as challenge any question/answer they might think is incorrect.

Any challenges by the candidates to be made with probable answer along with scanned copy of the supporting document **through e-mail only** to the e-mail ID **kptclrecruitment2016@gmail.com** duly indicating their name, application ID, TAT No. and the post applied for. The last date for receipt of challenges is **30th of December 2016.**

**NO CHALLENGES WILL BE ENTERTAINED AFTER THE DEADLINE INDICATED ABOVE.**

Sd/- **Director (Admn. & HR)**
Corporate Office, KPTCL, Kaveri Bhavan, Bengaluru - 560 009.